

# ನಿಮ್ಮ ಮೊಬೈಲ್, ನಿಮಗೆಷ್ಟು ಗೊತ್ತು?

ಎಲ್ಲರ ಕೈಯಲ್ಲಿ, ಜೇಬಲ್ಲಿ ಮೊಬೈಲ್ ಬಂದು ವರ್ಷಗಳೇ ಉರುಳಿವೆ. ಆದರೆ ಇವತ್ತಿಗೂ ಬಹುಸಂಖ್ಯೆಯ ಮೊಬೈಲ್ ಬಳಕೆದಾರರಿಗೆ ಮೊಬೈಲ್ ಕುರಿತು ಸಾಕಷ್ಟು ಮಾಹಿತಿ ಇಲ್ಲ. ಮೊಬೈಲ್ ತಂತ್ರಜ್ಞಾನ ಮುಂದುವರಿದಂತೆಯೇ ಅದರಲ್ಲಿ ಒಳಗೊಂಡಿರುವ ಅತ್ಯಾಧುನಿಕ ತಂತ್ರಜ್ಞಾನದ ಮಾಹಿತಿ ಎಲ್ಲರಿಗೂ ಸರಿಯಾಗಿ ತಲುಪುತ್ತಿಲ್ಲ. ಪ್ರತಿದಿನವೂ ಮಾರುಕಟ್ಟೆಗೆ ಬರುತ್ತಿರುವ ಹೊಸ ಮೊಬೈಲ್‌ಗಳು ಒಂದಕ್ಕಿಂತ ಒಂದು ಅತ್ಯಾಧುನಿಕ ತಂತ್ರಜ್ಞಾನವನ್ನು ನೀಡುತ್ತಿವೆ.

ನಿಮ್ಮ ಮೊಬೈಲ್ ಬಗ್ಗೆ ನಿಮಗೆ ಗೊತ್ತಿಲ್ಲದ ವಿವರಗಳನ್ನು ಕಲೆ ಹಾಕಿ. ತಂತ್ರಜ್ಞಾನದ ಸಮರ್ಥ ಬಳಕೆ ಮಾಡಿ.

* ಮೊಬೈಲ್‌ನಲ್ಲಿ 112 ಎನ್ನುವುದು 'ಎಮರ್ಜೆನ್ಸಿ' ಸಂಖ್ಯೆ. ನೀವು ಎಲ್ಲಿಗಾದರೂ ಹೋದಾಗ, ಏನಾದರೂ ತುರ್ತುಪರಿಸ್ಥಿತಿ ಅಥವಾ ಅಪಾಯ ಸಂಭವಿಸಿದರೆ, ನೆಟ್‌ವರ್ಕ್ ಇರುವ ಕಡೆಯಿಂದ 112 ಡಯಲ್ ಮಾಡಿ. ಆಗಬಹುದಾದ ಅನಾಹುತವನ್ನು ತಪ್ಪಿಸಿ. ನಿಮ್ಮ ಮೊಬೈಲ್‌ನ ಕೀಪ್ಯಾಡ್ ಲಾಕ್ ಆಗಿದ್ದಾಗಲೂ 112 ಡಯಲ್ ಮಾಡಿದರೆ ಅದು ಡಯಲ್ ಆಗುತ್ತದೆ. ಇದು ಜಗತ್ತಿನಾದ್ಯಂತ ಎಮರ್ಜೆನ್ಸಿ ನಂಬರ್!

* ನಿಮ್ಮ ಕಾರನ್ನು ರಿಮೋಟ್ ಕೀಯಿಂದ ಲಾಕ್ (ಅಟೊ ಕಾಪ್) ಮಾಡಿದ್ದೀರಿ. ಅದನ್ನು ಅನ್‌ಲಾಕ್ ಮಾಡಲು ನಿಮ್ಮ ಬಳಿಯ ಲಾಕ್ ಕಳೆದುಕೊಂಡಿದ್ದೀರಿ, ಅಥವಾ ತಕ್ಷಣಕ್ಕೆ ಲಾಕ್ ಸಿಗುತ್ತಿಲ್ಲ; ನೀವು ಮಾರ್ಕೆಟ್‌ನಲ್ಲಿದ್ದೀರಿ; ಸ್ಪೇರ್ ಕೀ ಮನೆಯಲ್ಲಿದೆ ಎಂದುಕೊಳ್ಳಿ. ಏನೂ ಚಿಂತೆ ಮಾಡಬೇಡಿ. ನಿಮ್ಮ ಬಳಿ ಮೊಬೈಲ್ ಇದೆಯಲ್ಲ, ಮನೆಯಲ್ಲಿ ಇರುವವರ ಮೊಬೈಲ್‌ಗೆ ಫೋನ್ ಮಾಡಿ. ನಿಮ್ಮ ಕಾರಿನ ಬಾಗಿಲಿನಿಂದ ಒಂದು ಅಡಿ ದೂರದಲ್ಲಿ ನಿಂತು ಮೊಬೈಲ್ ತೋರಿಸಿ. ಮನೆಯಲ್ಲಿ ಮೊಬೈಲ್ ಎತ್ತಿಕೊಂಡವರು ಅವರ ಮೊಬೈಲ್ ಬಳಿ ಕೀ ಇಟ್ಟು ಅನ್‌ಲಾಕ್ ಮಾಡಲಿ. ನಿಮ್ಮ ಕಾರು ಅನ್‌ಲಾಕ್ ಆಗುತ್ತದೆ! ಮನೆಯಿಂದ ಯಾರಾದರೂ ಕೀ ಎತ್ತಿಕೊಂಡು ಬರುವ ಶ್ರಮ ತಪ್ಪುತ್ತದೆ. ಅಂದ ಹಾಗೆ, ಈ ವಿಷಯದಲ್ಲಿ ಕಾರು ಮನೆಯಿಂದ ಎಷ್ಟು ದೂರ ಇದ್ದರೂ ಪರವಾಗಿಲ್ಲ. ನೀವು ಮನೆಯಿಂದ ನೂರಾರು ಕಿ.ಮೀ ದೂರವಿದ್ದರೂ ಈ ತಂತ್ರಜ್ಞಾನ ಕೆಲಸ ಮಾಡುತ್ತದೆ.

* ನಿಮ್ಮ ಸೆಲ್ ಫೋನ್‌ನ ಬ್ಯಾಟರಿ ಚಾರ್ಜ್ ಕಡಿಮೆ ಇದ್ದರೆ *3370# ಒತ್ತಿ. ಶೇ.50 ರಷ್ಟು ಬ್ಯಾಟರಿ ಚಾರ್ಜ್ ಆಗಿರುತ್ತದೆ. ಇದು ನಿಮ್ಮ ಮೊಬೈಲ್‌ನಲ್ಲಿ ರಿಸರ್ವ್ ಇರುವ ಚಾರ್ಜ್. ಮತ್ತೆ ನೀವು ಮೊಬೈಲ್ ಚಾರ್ಜ್ ಮಾಡುವಾಗ ರಿಸರ್ವ್‌ನಲ್ಲಿರುವ ಬ್ಯಾಟರಿ ಫುಲ್ ಚಾರ್ಜ್ ಆಗುತ್ತದೆ.

* ನಿಮ್ಮ ಮೊಬೈಲ್ ಕಳ್ಳತನ ಆಗುವ ಮೊದಲು ಹೀಗೆ ಮಾಡಿ., ನಿಮ್ಮ ಮೊಬೈಲ್ ಫೋನ್‌ನ ಸೀರಿಯಲ್ ನಂ. ಕೀ ಅನ್ನು ಒಂದು ಕಡೆ ಬರೆದಿಡಿ. *#06#. ಈ ಮಾದರಿಯಲ್ಲಿರಲಿ. ಆಗ 15 ಅಂಕೆಗಳ ಕೋಡ್ ಸ್ಕ್ರೀನ್ ಮೇಲೆ ಬೀಳುತ್ತದೆ. ಇದನ್ನು ಒಂದು ಪೇಪರ್ ಮೇಲೆ ಬರೆದಿಟ್ಟು ಹುಷಾರಾಗಿ ತೆಗೆದಿಡಿ. ಈಗ ನಿಮ್ಮ ಫೋನ್ ಕಳ್ಳತನವಾದರೆ ಕಸ್ಟಮರ್ ಕೇರ್‌ಗೆ ಫೋನ್ ಮಾಡಿ ಈ ಕೋಡ್ ನಂಬರ್ ಹೇಳಿ. ತಕ್ಷಣ ಅವರು ನಿಮ್ಮ ನಂಬರ್ ಬ್ಲಾಕ್ ಮಾಡುತ್ತಾರೆ. ಕಳ್ಳ ನಿಮ್ಮ ಮೊಬೈಲ್ ಬಳಸಲು ಸಾಧ್ಯವೇ ಇಲ್ಲ.

* ಸೆಲ್ ಫೋನ್ ಕಂಪೆನಿಗಳು ಸುಮಾರು 411 ಸೇವೆಗಳಿಗೆ (ಮಾಹಿತಿ ಕರೆಗಳಿಗೆ) ಒಂದರಿಂದ 1.75 ಡಾಲರ್‌ಗಳವರೆಗೆ ಚಾರ್ಜ್ ಮಾಡುತ್ತದೆ. ನಾವು ಟೆಲಿಫೋನ್ ಡೈರೆಕ್ಟರಿಗಳನ್ನು ಜತೆಯಲ್ಲಿಯೇ ಇಟ್ಟುಕೊಂಡಿರುವುದಿಲ್ಲ. ಒಂದು ವೇಳೆ ನಮಗೆ ಈ 411 ಸೇವೆಗಳಿಗೆ ಸಂಬಂಧಿಸಿದ ಮಾಹಿತಿ ಬೇಕಿದ್ದರೆ, (800) FREE411 (800) FREE411, ಅಥವಾ (800) 373-3411 (800) 373-3411 ಕರೆ ಮಾಡಬಹುದು. ಈ ಕರೆಗಳಿಗೆ ಯಾವುದೇ ಚಾರ್ಜ್ ಇರುವುದಿಲ್ಲ. ■


ನಿತ್ಯ ಸಂಗಾತಿ
ನಿಮ್ಮ ದಿನಚರಿಯನ್ನು ರೂಪಿಸಲು

ಸೊಬಗಿನ ದಿನಚರಿ 2011

ಸರಳ, ಉಪಯುಕ್ತ, ಸೌರಮಾನ, ಚಾಂದ್ರಮಾನ ಮತ್ತು ಇಸ್ಲಾಂ ಪದ್ಧತಿಗನುಗುಣವಾಗಿ, ಸಂಪೂರ್ಣ ರಜಾ ಮಾಹಿತಿಗಳೊಂದಿಗೆ.




ಪ್ರತಿಗಳು ದಿನಪತ್ರಿಕೆ ಮಾರಾಟಗಾರರು,
ಪುಸ್ತಕದ ಅಂಗಡಿಗಳು ಮತ್ತು ನಮ್ಮ ಕಛೇರಿಯಲ್ಲಿ ಲಭ್ಯ.

ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್,
ನಂ. 75, ಎಂ. ಜಿ. ರಸ್ತೆ, ಬೆಂಗಳೂರು- 01. ದೂರವಾಣಿ: 25880220 / 202 / 216 / 225
ಬಸವನಗುಡಿ : 25880208 ಸಿಟಿ : 25880209 ರಾಜಾಜಿನಗರ : 25880210
ಮೈಸೂರು: 2420532 / 129 ಹುಬ್ಬಳ್ಳಿ: 2372709 / 081
ಮಂಗಳೂರು: 2215852 / 2218334 ಗುಲ್ಬರ್ಗಾ: 255539 / 221808